# ತುಕ್ಕು ಮತ್ತು ಹೊಳಪು



ಒಂದೂರಿನಲ್ಲಿ ಒಬ್ಬ ಕಮ್ಮಾರನಿದ್ದ. ಅವನು ಕಬ್ಬಿಣದ ತುಂಡುಗಳಿಂದ ಕಿಟಕಿ, ಬಾಗಿಲು, ಗ್ರಿಲ್ ಮುಂತಾದ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿ ಅದರಿಂದ ಗಳಿಸಿದ ಸಂಪಾದನೆಯಲ್ಲಿ ಜೀವನ ಸಾಗಿಸುತ್ತಿದ್ದ.

ಒಮ್ಮೆ ಅವನು ಒಂದು ಭಾರಿ ಗಾತ್ರದ ಕಬ್ಬಿಣದ ತುಂಡಿನಿಂದ ಎರಡು ನೇಗಿಲುಗಳನ್ನು ತಯಾರಿಸಿದ. ಅದರಲ್ಲಿ ಒಂದು ನೇಗಿಲು ಒಬ್ಬ ರೈತನ ಕೈ ಸೇರಿತು. ಇನ್ನೊಂದು ನೇಗಿಲು ಬಹಳ ಕಾಲದವರೆಗೆ ಆ ಕಮ್ಮಾರನ ಬಳಿಯೇ ಉಳಿದು ಹೋಯಿತು. ಅದು ಯಾವುದಕ್ಕೂ ಉಪಯೋಗಕ್ಕೆ ಬಾರದೆ ನಿರುಪಯೋಗಿ ವಸ್ತುವಾಗಿಯೇ ಬಿದ್ದಿತು.

ಹೀಗಿರಲು ಸುಮಾರು ಒಂದು ವರ್ಷದ ನಂತರ ಈ ಎರಡು ನೇಗಿಲುಗಳು ಪರಸ್ಪರ ಭೇಟಿಯಾದವು. ರೈತನ ಬಳಿ ಇದ್ದ ನೇಗಿಲು ಬೆಳ್ಳಿಯಂತೆ ಫಳ ಫಳನೆ ಹೊಳೆಯುತ್ತಿತ್ತು. ಕಮ್ಮಾರನ ಬಳಿ ನಿರುಪಯೋಗಿಯಾಗಿ ಬಿದ್ದಿದ್ದ ನೇಗಿಲು ತುಕ್ಕುಹಿಡಿದು ನೀರಿನಲ್ಲಿ ಅದ್ದಿದ ಕೆಂಡ ಹೇಗೆ ಕಪ್ಪಾಗುವುದೋ ಅದೇ ರೀತಿ ಕಪ್ಪಾಗಿ ಹೋಗಿತ್ತು. ಆಗ ಕಪ್ಪಾಗಿದ್ದ ನೇಗಿಲು ಹೊಳೆಯುತ್ತಿದ್ದ ನೇಗಿಲನ್ನು ಕುರಿತು 'ನೀನು ಇಷ್ಟೊಂದು ಬೆಳ್ಳಗೆ ಹೊಳೆಯುತ್ತಿದ್ದೀಯಲ್ಲ. ಅದು ಹೇಗೆ ಸಾಧ್ಯವಾಯಿತು?' ಎಂದು ಕೇಳಿತು.

ಅದಕ್ಕೆ ಹೊಳೆಯುತ್ತಿದ್ದ ನೇಗಿಲು 'ನಾನು ದಿನವೂ ಕಷ್ಟಪಟ್ಟು ಕೆಲಸ ಮಾಡಿದ್ದರಿಂದ ಹೀಗೆ ಹೊಳೆಯಲು ಸಾಧ್ಯವಾಯಿತು. ನೀನು ಸದಾಕಾಲ ಸೋಮಾರಿಯಂತೆ ಕೆಲಸ ಮಾಡದೆ ವೃಥಾ ಕಾಲಹರಣ ಮಾಡುತ್ತ ಕಾಲ ಕಳೆದಿದ್ದೀಯಾ! ಆದ್ದರಿಂದ ನೀನು ಕೆಲಸಕ್ಕೆ ಬಾರದವನಾಗಿ ನಿರುಪಯೋಗಿ ವಸ್ತುವಾಗಿ ಬಿದ್ದಿದ್ದೀಯಾ! ಅದಕ್ಕೆ ನಿನಗೆ ತುಕ್ಕು ಹಿಡಿದಿದೆ' ಎಂದಿತು.

**(ಸಂಗ್ರಹ): ಎಂ.ಕೆ. ಮಂಜುನಾಥ್, ಬೆಂಗಳೂರು**

---



# ಭಾನುವಾರ

ಭಾನುವಾರ ಎಂದರೆ ಸಾಕು  
ಎಲ್ಲರಿಗೂ ಬಲು ಇಷ್ಟ  
ಶಾಲೆ, ಕಚೇರಿ ಇಲ್ಲವೆ ಇಲ್ಲ  
ಇಲ್ಲದು ಬೇಗನೆ ಏಳೋ ಕಷ್ಟ

ನಿತ್ಯದ ಹಾಗಿನ ದಿನವಿದು ಅಲ್ಲವು  
ಇಂದಿಗೆ ಬೇರೆ ವಿಧಾನ  
ಏಳಲು, ಮೀಯಲು, ಉಣ್ಣಲು, ತಿನ್ನಲು  
ತೊಡಗುವುದೆಲ್ಲ ನಿಧಾನ

ಶಾಲೆಯ ವಾಹನ ಮನೆ ಬಳಿ ಬಂದು  
ಹಾರನ್ ಹಾಕದು ಇಂದು  
ಮುದ್ದಿನ ಪುಟ್ಟಗೆ ಬೇಗನೆ ಉಣಿಸಲು  
ಗಡಿ ಬಿಡಿ ಮಾಡದು ಎಂದೂ

ಓದು, ಬರಹವು, ಮಗ್ಗಿಯು, ಲೆಕ್ಕವು  
ಇಲ್ಲವು ಈ ಬಗೆ ಕಾಟ  
ಶಾಲೆಯ ಮಕ್ಕಳಿಗೆಲ್ಲಾ ದಿನವಿಡಿ  
ಹಾಡು ಕುಣಿತದ ಆಟ

ಮುಂಜಾವಿಂದ ಸಂಜೆಯವರೆಗೂ  
ಹಗಲಲಿ ಹೊರಗಡೆ ಸುತ್ತು  
ಗುಡ್ಡವೊ, ಬೆಟ್ಟವೊ, ಗದ್ದೆಯೊ, ತೋಟವೊ  
ತಿರುಗಲು ನಮಗಿದೆ ಹೊತ್ತು

ಮಕ್ಕಳು ಖುಶಿಯಲಿ ಕೂಡಲು ಹಾಡಲು  
ನಲಿ ನಲಿದಾಡಲು ಹೀಗೆ  
ವಾರಕೆ ಎರಡೆರಡಾದರೂ ಇಂತಹ  
ದಿನಗಳೆ ಇದ್ದರೆ ಹೇಗೆ?

**-ಪಳಕಳ ಸೀತಾರಾಮ ಭಟ್ಟ, ಮಿತ್ತಬೈಲು**